ಸ್ಕ್ರ 1885ನೇ ಇಸವಿ ಆಗಸ್ಟ್ ತಿಂಗಳ ಕಾಲಸಿತ್ಥಿರಿಪೋರ್ಟುಗಳು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ.—ಬೆಂಗಳೂರು ಹೆಡ್ ಕ್ವಾರ್ಟರ್‌ನಲ್ಲಿ ಒಂದು ಇಂಚ್ 70 ಸೆಂಟ್ಸ್ ಮಳೆ ಅಳೆಯಲ್ಪಟ್ಟಿರುತ್ತೆ.

ಡಿಸ್ಟ್ರಿಕ್ಟ್ ಮುಳೆ ಬಹು ಸ್ವಲ್ಪ ಅಂದರೆ ಸರಾಸರಿ 1 ಇಂಚ್ 47 ಸೆಂಟ್ಸ್ ಮಳೆ ಬಿದ್ದಿರುತ್ತೆ.

ಫಸಲ್ ಸ್ಥಿತಿ—ತಕ್ಕಷ್ಟು ಮಳೆ ಇಲ್ಲದ್ದರಿಂದ ಸಾಧಾರಣವಾಗಿ ಬೆಳೆಯಲ್ಲಿರುವ ತರಿ ವ ಖುಷ್ಕಿ ಫಸಲೆಗಳು ಬಣಗುತ್ತಲಿವೆ ಯಂದು ರಿಪೋರ್ಟುಆಗಿರುತ್ತೆ. ಉಳುಮೆ ಮತ್ತು ಬಿತ್ತನೆ ಕೆಲಸಗಳಿಗೆ ಬಹಳ ಅನುಕೂಲವಾಗಿರುತ್ತೆ. ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ಹುರಳಿ, ಯಳ್ಳು, ರಾಗಿ, ಪೈರಾಜಪತ್ತಾ, ಪಾರಕ ಮೈಸೂರ ಕೇರಾವಾಗಿವೆ. ಮತ್ತು ಮೂರು ತಾಲ್ಲೂಕುಗಳಲ್ಲಿ ಬಳ್ಳಿದುಳ್ಳು ಗನ್ನಾ ಕಟಾವಾಗಿದೆ.

ಜನಾರೋಗ್ಯ—ಚೆನ್ನಾಗಿದೆ.

ಬೆಂಗಳೂರು ಪಟ್ಟಣದಲ್ಲಿ 3 ಮಂದಿಯು ಮತ್ತು ಇದೆ ತಾಲ್ಲೂಕು ಅಗರ ಗ್ರಾಮದಲ್ಲಿ ಒಬ್ಬನೂ ಉಪಾಲಜ್ವರದಿಂದ ಹೋಗಿದ್ದಾರೆ.

ಜನಮರಣ—ಜೂನ್ ತಿಂಗಳಲ್ಲಿ 648 ಮಂದಿ, ಜುಲೈಯಲ್ಲಿ 805 ಮಂದಿ ಹೋಗಿರುತ್ತಾರೆ. ಆದ್ದರಿಂದ ಜುಲೈಯಲ್ಲಿ 157 ಮಂದಿ ಜಾಸ್ತಿ.

ಕಾಲ್ನಡೆ—ಯಲ್ಲಾ ಕಾರಣಗಳಿಂದಲೂ ಜೂನ್‌ತಿಂಗಳಲ್ಲಿ 1,924 ಕಾಲ್ನಡೆಗಳು, ಜುಲೈಯಲ್ಲಿ 2,168 ಈ ಮೇರೆ ಹೋಗಿರುತವೆ. ಆ ಪೈಕಿ 145 ಕಾಲ್ನಡೆಗಳು ಕಾಡು ಮೃಗಗಳಿಂದ ಕೊಲ್ಲಲ್ಪಟ್ಟಿರುತವೆ.

ಜಮ್ಮಿಗಳು—3,149—3—5 ರೂಪಾಯಿ ಕಂದಾಯ ಬಾಳುವ ಜಮೀನು ಸಾಗುವಳಿಬಗ್ಗೆ ಪರಭಾರೆಕೊಳ್ಳಲ್ಪಟ್ಟಿದೆ.

ಎಲ್. ರಿಕೆಟ್ಸ್,
ಡೆಪ್ಯೂಟಿ ಕಮ್ಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಮಳೆ.—ಈ ಮಾಹೆಯೊಳಗೆ ಇದರಡಿ ಕಂಡಂತೆ ಮಳೆ ಅಳೆಯಲ್ಪಟ್ಟಿರುತ್ತೆ:—

		ಇಂ.	ಸೆಂ.			ಇಂ.	ಸೆಂ.
ಶಿವಮೊಗ್ಗ	..	3	61	ನಾಗರ	..	22	14
ಚೆನ್ನಗಿರಿ	..	2	66	ನಗರ	..	51	80
ಹೊನ್ನಾಳಿ	..	1	75	ತೀರ್ಥಹಳ್ಳಿ	..	30	2½
ಶಿಕಾರಿಪುರ	..	6	0	ದಾವಣಗೆರೆ	..	1	20
ಸೊರಬ	..	13	66				

ಬೀಜವಾದ ಧಾನ್ಯಗಳು—ಹುರಳಿ, ರಾಗಿ, ಜೋಳ, ಯಳ್ಳು, ಹರಳು, ನವಣೆ, ತೊಗರಿ, ಮತ್ತು ಪತ್ತಿಬೀಜ.

ಫಸಲ್ ಸ್ಥಿತಿ— ಮಳೆ ಅತ್ಯಾವಶ್ಯಕವಾಗಿದೆ. ಬೆಳೆಯಲ್ಲಿರುವ ಖುಷ್ಕಿ ಫಸಲೆಗಳು ಇದುವರಿಗೂ ವಳ್ಳೇಸ್ಥಿತಿಯಲ್ಲಿ ಇದ್ದಂಥಾವುಈಗ ಜಾಗ್ರತೆಯಾಗಿ ಬಣಗುತ್ತಲಿವೆ.

ಕಟಾವಾದ ಫಸಲೆಗಳು—ಉದ್ದು ವ ಯಳ್ಳು.

ಜನಾರೋಗ್ಯ—ಸಾಧಾರಣವಾಗಿ ಚೆನ್ನಾಗಿ ಯಿದೆ. ಡಿಸ್ಟ್ರಿಕ್ಟಿನ ಕೆಲವು ಪ್ರದೇಶಗಳಲ್ಲಿ ಜ್ವರ ಭಳಿ ವ್ಯಾಪಿಸಿ ಯಿದೆ.

ಜಮ್ಮಿಗಳು—ಈ ಮಾಹೆಯೊಳಗೆ 1,946—10—0 ರೂಪಾಯಿ ಕಂದಾಯವುಳ್ಳ ಜಮೀನು ಸಾಗುವಳೀ ಬಗ್ಗೆ ತೆಗದ ಕೊಳ್ಳಲ್ಪಟ್ಟಿರುತ್ತೆ, 95—12—0 ರೂಪಾಯಿ ಕಂದಾಯದ ಜಮೀನಿಗೆ ರಾಜೀನಾಮೆ ಬಂದಿರುತ್ತೆ.

ದಾವಣೆ—ಜಪಾವಾಗುತ್ತಲಿದೆ.

ಎ. ಹೆಚ್. ಮೆಕ್ಕಿಂಟಯರ್,
ಡೆ। ಕಮ್ಮಿಷನರ್.